ಸಾಯಂಕಾಲ ಕ್ರೀಡಾ ತರಬೇತಿಗೆ ಮೊದಲು	— ಟೀ	ಮೂದು ಕಪ್
ಸಾಯಂಕಾಲ ಕ್ರೀಡಾ ತರಬೇತಿ ನಂತರ	— ಹಾಲು	೧೫೦ ಗ್ರಾಂ
ರಾತ್ರಿ ಊಟ	— ಅನ್ನ	ಮಿತಿಯಿಲ್ಲ
	೨. ಚಪಾತಿ	೫
ಮಾಂಸಹಾರಿಗಳಿಗೆ	೩. ಮಾಂಸ :	ಮೀನು ೧೦೦ ಗ್ರಾಂ
	ಮೊಟ್ಟೆ : ಕೋಳಿ	ಅಥವಾ ೨ ಮೊಟ್ಟೆ
ಸಸ್ಯಾಹಾರಿಗಳಿಗೆ	ವಿಶೇಷ ತರಕಾರಿ	
	ಪಲಾವ್	ಆವಶ್ಯವಿದ್ದಷ್ಟು

ಯುವಜನ ಸೇವಾ ಮತ್ತು ಕ್ರೀಡಾ ಇಲಾಖೆ ಸಿ. ಅಂಡ್ ಆರ್. ರೂಲ್ಸ್ ಬಗ್ಗೆ

೪೦೬೦. ಶ್ರೀ ಕೆ. ವಸಂತ ಬಂಗೇರ (ಬೆಳ್ತಂಗಡಿ).— ಮಾನ್ಯ ಸಮಾಜ ಕಲ್ಯಾಣ ಯುವಜನ ಸೇವಾ ಮತ್ತು ಕ್ರೀಡಾ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ?

ಅ) ಯುವಜನ ಸೇವಾ ಮತ್ತು ಕ್ರೀಡಾ ಇಲಾಖೆಯಲ್ಲಿ ಕಳೆದ ೧೨ ವರ್ಷಗಳಿಗೂ ಮಿಕ್ಕ ದಕ್ಷತೆಯಿಂದ ಸೇವೆ ಸಲ್ಲಿಸುತ್ತಿರುವ ಸಹಾಯಕ ಯುವಜನ ಸೇವಾ ಮತ್ತು ಕ್ರೀಡಾಧಿಕಾರಿ 'ಸಿ ಅಂಡ್ ಆರ್' ಇನ್ನೂ ಇತ್ಯರ್ಥವಾಗದೇ ಇರಲು ಕಾರಣವೇನು?

ಆ) ಈ ಅಧಿಕಾರಿಗಳ ವೇತನವನ್ನು ಕೇಂದ್ರ ಸರ್ಕಾರವು ಪಾವತಿಸುವುದೇ ಅಥವಾ ರಾಜ್ಯ ಸರ್ಕಾರವೇ?

ಇ) ಇವರ ವೇತನ ಪುನರ್ನಿರ್ಣಯಕ್ಕೆ ನ್ಯಾಯಾಲಯವು ತಕ್ಕದಾದ ತೀರ್ಪು ನೀಡಿದ್ದರೂ, ಇದುವರೆಗೆ ಇವರಿಗೆ ಪುನರ್ನಿರ್ಣಯಿತ ವೇತನ ನಿಗಧಿ ಪಡಿಸಿ ಪಾವತಿ ಮಾಡಲು ವಿಳಂಬವಾಗುತ್ತಿರುವುದು ನಿಜವೇ?

ಶ್ರೀ ಪಿ. ಜಿ. ಆರ್. ಸಿಂಧ್ಯ (ಸಮಾಜ ಕಲ್ಯಾಣ ಯುವಜನ ಸೇವಾ ಮತ್ತು ಕ್ರೀಡಾ ಮಂತ್ರಿಗಳು).—

ಅ) ಯುವಜನ ಸೇವಾ ಮತ್ತು ಕ್ರೀಡಾ ಇಲಾಖೆಯ ವೃಂದ ಮತ್ತು ನೇಮಕಾತಿ ನಿಯಮಗಳನ್ನು ತಯಾರಿಸಿದ್ದು, ಅದರಲ್ಲಿ ಸಹಾಯಕ ಯುವಜನ ಸೇವಾ ಮತ್ತು ಕ್ರೀಡಾಧಿಕಾರಿಗಳ ವೃಂದ ಮತ್ತು ನೇಮಕಾತಿ ನಿಯಮಗಳನ್ನು ಸಹ ಸೇರಿಸಲಾಗಿದೆ. ಸದರಿ ವೃಂದ ಮತ್ತು ನೇಮಕಾತಿ ನಿಯಮಗಳು ಸಮಿಕ್ಷಾ ಸಮಿತಿಯ ಮುಂದಿದೆ.

ಆ) ಕೇಂದ್ರ ಸರ್ಕಾರ ಪಾವತಿಸುವುದು.

ಇ) ಸರ್ವೋಚ್ಚ ನ್ಯಾಯಾಲಯದ ತೀರ್ಪಿನಂತೆ, ಸಹಾಯಕ ಯುವಜನ ಸೇವಾ ಮತ್ತು ಕ್ರೀಡಾಧಿಕಾರಿಗಳಿಗೆ ಕೇಂದ್ರ ಸರ್ಕಾರದಿಂದ ಮಂಜೂರಾಗಿರುವ ಪರಿಷ್ಕೃತ ವೇತನ ಶ್ರೇಣಿಗಳಲ್ಲಿ ಇವರುಗಳ ವೇತನವನ್ನು ನಿಗಧಿಪಡಿಸಿ, ಇದರಿಂದ ಉಬ್ಬಿಸಿದ ಬಾಕಿ ಹಣವನ್ನು ನೀಡಲು ಸರ್ಕಾರ ಮಂಜೂರಾತಿ ನೀಡಿದೆ.

ಕೊಯಿಲಾದಲ್ಲಿರುವ ಜಿಲ್ಲಾ ತಳಿ ವರ್ಧನ ಕೇಂದ್ರದಲ್ಲಿ ವಾಹನ ಚಾಲಕರು, ಮತ್ತು ಕೃಷಿ ಸಹಾಯಕರು ನಿಗಾವಣೆಗೊಳ್ಳದೇ ಇರುವುದು.

೪೦೬೩. ಶ್ರೀ ಕೆ. ವಸಂತ ಬಂಗೇರ (ಬೆಳ್ತಂಗಡಿ) —ಮಾನ್ಯ ರೇಷ್ಮೆ ಮತ್ತು ಪಶುಸಂಗೋಪನಾ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಲ್ಲಿ ದಯವಿಟ್ಟು ಉತ್ತರಿಸುವರೇ ?

ಅ) ದಕ್ಷಿಣ ಕನ್ನಡ ಜಿಲ್ಲೆಯ ಕೊಯಿಲದಲ್ಲಿರುವ ಜಿಲ್ಲಾ ಜಾನುವಾರು ಕ್ಷೇತ್ರದ ಹಂದಿ ತಳಿ ವರ್ಧನ ಕೇಂದ್ರದಲ್ಲಿ ವಾಹನ ಚಾಲಕರು ಮತ್ತು ಕೃಷಿ ಸಹಾಯಕರು ನಿಗಾವಣೆಗೊಳ್ಳದೆ ಇದೇ ಸ್ಥಳದಲ್ಲಿ ಕೆಲಸ ಮಾಡಿಕೊಂಡಿರುವುದು ಸರ್ಕಾರದವರ ಗಮನಕ್ಕೆ ಬಂದಿದೆಯೇ ?